# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಅಗ್ರಹಾರ ದಾಸರಹಳ್ಳಿ ವಾರ್ಡ್ ಸಂಖ್ಯೆ: 105**

---

ಸಂ : ಸ.ಅ(ವಾ–105)/ಪಿ.ಆರ್/ 31 /2021–22 ದಿನಾಂಕ: 04/**12**/**2021**

## ವಾರ್ಡ್ ಸಮಿತಿ ಸಭೆಯ ನಡವಳಿ

ದಿನಾಂಕ: 04–12–2021 ರಂದು ವಾರ್ಡ್ ಸಂಖ್ಯೆ: 105 **ಅಗ್ರಹಾರ ದಾಸರಹಳ್ಳಿ ವಾರ್ಡ್** ನಲ್ಲಿ ಶ್ರೀ ಶಿವಸ್ವಾಮಿ ಮಾನ್ಯ ಜಂಟಿ ಆಯುಕ್ತರು(ಪ) ಬಿಬಿಎಂಪಿ ಹಾಗೂ ವಾರ್ಡ್ ನಂ. 105ರ ನೋಡಲ್ ಅಧಿಕಾರಿಗಳು ಇವರ ಅಧ್ಯಕ್ಷತೆಯಲ್ಲಿ ನಡೆದ ವಾರ್ಡ್ ಸಮಿತಿ ಸಭೆಯ ನಡವಳಿ

**ಹಾಜರಿದ್ದ ಅಧಿಕಾರಿ/ನೌಕರರು:–**

1) ಶ್ರೀಮತಿ. ಎನ್. ಅನ್ನಪೂರ್ಣ, ವೈದ್ಯಾಧಿಕಾರಿಗಳು, ಪ್ರಾಥಮಿಕ ಆರೋಗ್ಯ ಕೇಂದ್ರ, ಅಗ್ರಹಾರ ದಾಸರಹಳ್ಳಿ.
2) ಶ್ರೀ ತೀರ್ಥಪ್ರಸಾದ್, ಎಇಇ, ಘನತ್ಯಾಜ್ಯ ವಿಭಾಗ
3) ಶ್ರೀ ರೇಣುಕಾ ಪ್ರಸಾದ್. ಎ.ಆರ್.ಒ
4) ಶ್ರೀ ರಾಜೇಂದ್ರ ಕಂದಾಯ ಪರಿವೀಕ್ಷಕರು.
5) ಶ್ರೀ. ಅರುಣ್ ಕುಮಾರ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ ವಾರ್ಡ್ ನಂ. 105
6) ಶ್ರೀ ನಾಗರಾಜ್. ಕೆ.ಬಿ, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್‌ಬಿ
7) ಶ್ರೀ ಆನಂದ್, ಹೆಚ್.ವಿ, ಸಹಾಯಕ ಅಭಿಯಂತರರು, ಬೆಸ್ಕಾಂ
8) ಶ್ರೀ ನಾಗಣ್ಣಗೌಡ, ಹಿರಿಯ ಆರೋಗ್ಯ ಪರಿವೀಕ್ಷಕರು
9) ಶ್ರೀ ರಂಗನಾಥ್, ಕಿರಿಯ ಆರೋಗ್ಯ ಪರಿವೀಕ್ಷಕರು
10) ಶ್ರೀ ಸೈಯದ್ ಜಮೀಲ್, ಕಿರಿಯ ಅಭಿಯಂತರರು, ಬೀದಿ ದೀಪಗಳು
11) ಶ್ರೀ ವಿನೋದ್ ಎಂ, ವಾರ್ಡ್ ಮಾರ್ಷಲ್

ಮಾನ್ಯ ಅಧ್ಯಕ್ಷರ ಸ್ವಾಗತದೊಂದಿಗೆ ಅಧಿಕಾರಿಗಳು/ಹಾಜರಿದ್ದವರೊಂದಿಗೆ ಸಭೆಯನ್ನು ಪ್ರಾರಂಭಿಸಲಾಯಿತು.

- ಸಭೆಯಲ್ಲಿ ಈ ಹಿಂದೆ ಕೈಗೊಂಡ ನಿರ್ಣಯಗಳ ಬಗ್ಗೆ ಚರ್ಚಿಸಲಾಯಿತು.
- ಮಾನ್ಯ ಅಧ್ಯಕ್ಷರು ಮಾತನಾಡಿ ಗುಂಡೂರಾವ್ ಕಾಲೋನಿಯ ಖಾಲಿ ಸ್ಥಳಗಳಲ್ಲಿ ಬಿದ್ದಿರುವ ಡೆಬ್ರಿಸ್ ಗಳನ್ನು ತೆರವುಗೊಳಿಸುವಂತೆ ವಾರ್ಡ್ ಇಂಜನೀಯರ್‌ಗೆ ಸೂಚಿಸಿದರು.

- ವಾರ್ಡ್ ಕಚೇರಿ ರಸ್ತೆಯಲ್ಲಿದ್ದ ಒಣಗಿದ ಮರಗಳನ್ನು ತೆರವುಗೊಳಿಸಿರುವುದಾಗಿ ಅರಣ್ಯ ಇಲಾಖೆ ಸಿಬ್ಬಂದಿಗಳು ತಿಳಿಸಿರುತ್ತಾರೆ.
- ವಾರ್ಡ್ ವ್ಯಾಪ್ತಿಯ ಪಾರ್ಕ್‌ಗಳಲ್ಲಿ ಬೈಕ್‌ಗಳು ಕಳ್ಳತನವಾಗುತ್ತಿದ್ದು ಸೂಕ್ತ ಕ್ರಮಕೈಗೊಳ್ಳಬೇಕೆಂದು ಸಾರ್ವಜನಿಕರು ತಿಳಿಸಿರುತ್ತಾರೆ. ಅದರಂತೆ ಬೀಟ್ ಪೋಲಿಸ್/ಪೋಲಿಸ್ ಸಿಬ್ಬಂದಿಗಳನ್ನು ನೇಮಿಸುವುದಾಗಿ ಮಾನ್ಯ ಅಧ್ಯಕ್ಷರು ತಿಳಿಸಿರುತ್ತಾರೆ.
- ವಾರ್ಡ್ ವ್ಯಾಪ್ತಿಯಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವುದು ಪ್ರಗತಿಯಲ್ಲಿರುವುದಾಗಿ ಸಹಾಯಕ ಅಭಿಯಂತರರು ಮಾನ್ಯ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.
- ಸಭೆಯಲ್ಲಿ ಬಿ ಡಬ್ಲ್ಯೂ ಎಸ್ ಎಸ್ ಬಿ ಅಧಿಕಾರಿಗಳು ಹಾಜರಿದ್ದು 9ನೇ ಮುಖ್ಯರಸ್ತೆಯ ಬಸವೇಶ್ವರ ನಗರ ಪೋಲಿಸ್ ಠಾಣೆ ಹಿಂಭಾಗ ಸಬ್ ಲೈನ್ ಕಾಮಗಾರಿ ಪೂರ್ಣಗೊಂಡಿರುವುದಾಗಿ ಮಾನ್ಯ ಅಧ್ಯಕ್ಷರಿಗೆ ತಿಳಿಸಿರುತ್ತಾರೆ.

- ಸಭೆಯಲ್ಲಿ ಡಾ// ಅನ್ನಪೂರ್ಣ, ಪ್ರಾಥಮಿಕ ಆರೋಗ್ಯ ಕೇಂದ್ರ ಅಗ್ರಹಾರ ದಾಸರಹಳ್ಳಿ ವೈದ್ಯರು ಹಾಜರಿದ್ದು ಕೋವಿಡ್ ವರದಿಯನ್ನು ಮಾನ್ಯ ಅಧ್ಯಕ್ಷರಿಗೆ ನೀಡಿರುತ್ತಾರೆ. ಅದರಂತೆ ಶೇಕಡ 90ರಷ್ಟು ಮೊದಲನೇ ಕೋವಿಡ್ ಲಸಿಕೆ ನೀಡಿರುವುದಾಗಿ ಮತ್ತು ಎರಡನೇ ಲಸಿಕೆ ಸುಮಾರು 2500 ಜನರಿಗೆ ಬಾಕಿ ಇರುವುದಾಗಿ ತಿಳಿಸಿರುತ್ತಾರೆ. ಹಾಗೂ ಇದುವರೆಗೂ ಸುಮಾರು 4 ಸಕ್ರಿಯ ಪ್ರಕರಣಗಳಿದ್ದು ಎಲ್ಲರೂ ಹೋಂ ಐಸೋಲೇಶನ್ ನಲ್ಲಿ ಇದ್ದು ಚಿಕಿತ್ಸೆ ಪಡೆದುಕೊಳ್ಳುತ್ತಿದ್ದಾರೆ ಎಂದು ವೈದ್ಯರು ತಿಳಿಸಿರುತ್ತಾರೆ.

- ಮಾನ್ಯ ಅಧ್ಯಕ್ಷರು ಮಾತನಾಡಿ ಪ್ರತಿ ದಿನ ಸುಮಾರು 600 ಜನರಿಗೆ ಕೋವಿಡ್ ಲಸಿಕೆ ನೀಡಬೇಕೆಂದು ವೈದ್ಯರಿಗೆ ತಿಳಿಸಿರುತ್ತಾರೆ. ಆದರೆ ಪ್ರತಿ ದಿನ ಸುಮಾರು 200 ಲಸಿಕೆ ನೀಡುತ್ತಿರುವುದಾಗಿ ತಿಳಿಸಿರುತ್ತಾರೆ.

- **ಆರೋಗ್ಯ ಇಲಾಖೆ:-** ಮಾನ್ಯ ಅಧ್ಯಕ್ಷರು ವಾರ್ಡ್ ವ್ಯಾಪ್ತಿಯ ಗುಂಡೂರಾವ್ ಕಾಲೋನಿಯ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಕಾಮಗಾರಿಯನ್ನು ಪರಿಶೀಲಿಸಿ ಗುಣಮಟ್ಟ ಕಾಯ್ದಿರಿಸುವಂತೆ ಮತ್ತು ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸಲು ಕ್ರಮಕೈಗೊಳ್ಳುವಂತೆ ಗುತ್ತಿಗೆದಾರರಿಗೆ ತಿಳಿಸಿದರು.

- **ಸ್ವಚ್ಛತೆ ಮತ್ತು ಘನತ್ಯಾಜ್ಯ ವಿಲೇವಾರಿ ಬಗ್ಗೆ:-** ವಾರ್ಡ್ ವ್ಯಾಪ್ತಿಯ ಬ್ಲ್ಯಾಕ್‌ಸ್ಪಾಟ್‌ಗಳನ್ನು ಕೂಡಲೇ ತೆರವುಗೊಳಿಸುವಂತೆ ಮತ್ತು ಅನಧೀಕೃತ ಜಾಗಗಳಲ್ಲಿ ಕಸವನ್ನು ಸುರಿಯುವವರ ಮೇಲೆ ನಿಗಾವಹಿಸಿ ದಂಡವಿಧಿಸುವಂತೆ ಮಾರ್ಷಲ್‌ಗಳಿಗೆ ಮಾನ್ಯ ಅಧ್ಯಕ್ಷರು ತಿಳಿಸಿದರು.

- ಬಸವೇಶ್ವರ ನಗರ 1ನೇ ಮುಖ್ಯರಸ್ತೆಯಲ್ಲಿ ಅತಿ ಹೆಚ್ಚು ಕಸ ಸಂಗ್ರಹವಾಗುತ್ತಿದ್ದು ಕೂಡಲೇ ತೆರವುಗೊಳಿಸುವಂತೆ ಮಾನ್ಯ ಅಧ್ಯಕ್ಷರು ಘನತ್ಯಾಜ್ಯ ಅಧಿಕಾರಿಗಳಿಗೆ ತಿಳಿಸಿದರು.

- ವಾರ್ಡ್ ವ್ಯಾಪ್ತಿಯಲ್ಲಿ ಅನಧಿಕೃತ ಫ್ಲೆಕ್ಸ್‌ಗಳನ್ನು/ ಬ್ಯಾನರ್‌ಗಳನ್ನು ತೆರವುಗೊಳಿಸಲು ಕ್ರಮವಹಿಸಬೇಕೆಂದು ಮಾನ್ಯ ಅಧ್ಯಕ್ಷರು ತಿಳಿಸಿದರು

- **ಬೆಸ್ಕಾಂ/ ಕೆ.ಪಿ.ಟಿ.ಸಿ.ಎಲ್ –** ವಾರ್ಡ್ ವ್ಯಾಪ್ತಿಯಲ್ಲಿ ಕೆ.ಪಿ.ಟಿ.ಸಿ.ಎಲ್ ವತಿಯಿಂದ ಹೈಟೆನ್ಷನ್ ಲೈನ್ ಭೂಗತ ಅಳವಡಿಕೆ ಕಾಮಗಾರಿ ಪ್ರಗತಿಯಲ್ಲಿದ್ದು ಕಾಮಗಾರಿಯನ್ನು ಶೀಘ್ರವಾಗಿ ಪೂರ್ಣಗೊಳಿಸುವಂತೆ ಮತ್ತು ಕತ್ತರಿಸಿರುವ ರಸ್ತೆಗಳನ್ನು ಸುಸ್ಥಿತಿಯಲ್ಲಿಡುವಂತೆ ಅಧಿಕಾರಿಗಳಿ ಮಾನ್ಯ ಅಧ್ಯಕ್ಷರು ತಿಳಿಸಿದರು.

- **ಬೀದಿದೀಪಗಳು :** ವಾರ್ಡ್ ವ್ಯಾಪ್ತಿಯಲ್ಲಿ ಬೀದಿದೀಪಗಳನ್ನು ಸರಿಯಾಗಿ ನಿರ್ವಹಿಸುವಂತೆ ಮಾನ್ಯ ಅಧ್ಯಕ್ಷರು ಸಂಭಂದಿಸಿದ ಅಧಿಕಾರಿಗಳಿಗೆ ತಿಳಿಸಿದರು.

ಅಂತಿಮವಾಗಿ ನೋಡಲ್ ಅಧಿಕಾರಿಗಳು ಮಾತನಾಡಿ ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳಿಗೆ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳಲು ಎಲ್ಲಾ ಇಲಾಖೆಗಳು ಸಮನ್ವಯತೆಯಿಂದ ಕಾರ್ಯನಿರ್ವಹಿಸುಲು ಸೂಚಿಸಿ ಮುಂದಿನ ಸಭೆಗೆ ಎಲ್ಲಾ ಅಧಿಕಾರಿ ಸಿಬ್ಬಂದಿಗಳು ಹಾಜರಿರಲು ತಿಳಿಸಿ ಸಭೆಯನ್ನು ಮುಕ್ತಾಯ ಮಾಡಿದರು.

04/12/21

ಸದಸ್ಯ ಕಾರ್ಯದರ್ಶಿ
ಹಾಗೂ ಸಹಾಯಕ ಅಭಿಯಂತರರು
ವಾರ್ಡ್ ನಂ. 105 ಅಗ್ರಹಾರ ದಾಸರಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

4/12/21

ವಾರ್ಡ್ ಸಮಿತಿ ಅಧ್ಯಕ್ಷರು
ಹಾಗೂ ವಾರ್ಡ್ ನೋಡಲ್ ಅಧಿಕಾರಿಗಳು
ವಾರ್ಡ್ ನಂ. 105 ಅಗ್ರಹಾರ ದಾಸರಹಳ್ಳಿ
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ಪ್ರತಿಯನ್ನು:-**

1) ಮಾನ್ಯಆಯುಕ್ತರುರವರ ಅವಗಾಹನೆಗೆ ಸಲ್ಲಿಸಲು ಆಪ್ತ ಕಾರ್ಯಾಲಯಕ್ಕೆ ಸಲ್ಲಿಸದೆ.
2) ಮಾನ್ಯ ವಿಶೇಷ ಆಯುಕ್ತರು (ಯೊಜನೆ) ರವರ ಅವಗಾಹನೆಗೆ ಸಲ್ಲಿಸದೆ.
3) ಮಾನ್ಯ ವಿಶೇಷ ಆಯುಕ್ತರು (ಘನತ್ಯಾಜ್ಯ) ರವರ ಅವಗಾಹನೆಗೆ ಸಲ್ಲಿಸದೆ.
4) ಜಂಟಿಆಯುಕ್ತರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
5) ಮುಖ್ಯಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
6) ಅಧೀಕ್ಷಕಅಭಿಯಂತರರು (ಪಶ್ಚಿಮ) ರವರ ಅವಗಾಹನೆಗೆ ಸಲ್ಲಿಸದೆ.
7) ಕಾರ್ಯಪಾಲಕಅಭಿಯಂತರರು (ಗೋವಿಂದರಾಜನಗರ) ವಿಭಾಗರವರಿಗೆ ಸೂಕ್ತ ಕ್ರಮಕ್ಕಾಗಿ ಸಲ್ಲಿಸದೆ.
8) ಸಹಾಯಕಕಾರ್ಯಪಾಲಕಅಭಿಯಂತರರು, ಬೆಸ್ಕಾಂ ರವರ ಮಾಹಿತಿಗಾಗಿ ಕಳುಹಿಸಿದೆ.
9) ಸಹಾಯಕಕಾರ್ಯಪಾಲಕಅಭಿಯಂತರರು, ಬಿ.ಡಬ್ಲ್ಯೂಎಸ್.ಎಸ್.ಬಿ ರವರ ಮಾಹಿತಿಗಾಗಿ ಕಳುಹಿಸಿದೆ